ಉ) ಏರಿ ಕೆಲಸ ಮತ್ತು ಸಿಡಿ ಕೆಲಸದ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಉಳಿದಂತೆ ಖಡೀಕರಣ ಡಾಂಬರೀಕರಣ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಊ) ಏರಿ ಕೆಲಸ ಮತ್ತು ಸಿಡಿ ಕೆಲಸ ಪೂರ್ಣಗೊಳಿಸಲಾಗಿದೆ. ಖಡೀಕರಣ, ಡಾಂಬರೀಕರಣ ಕಾಮಗಾರಿಗೆ ನಿಯಮಾವಳಿಗಳಂತೆ ಕಾಲಮಿತಿ ನಿಗದಿಪಡಿಸಲಾಗುವುದು.

ತೇರದಾಳದಿಂದ ಕಾಗವಾಡ ರಸ್ತೆ ನಿರ್ಮಾಣ

3148 - ಶ್ರೀ ಪಾಟೀಲ ಶಿವಾನಂದ ಸಿದ್ದರಾಮಗೌಡ (ತಿಕೋಟ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ತೇರದಾಳ-ಕಾಗವಾಡ ರಸ್ತೆ ನಿರ್ಮಿಸಬೇಕಾದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಅದು ಎಷ್ಟು ಕಿ.ಮೀ. ಉದ್ದವಾಗಿರುತ್ತದೆ?*

ಇ) *ಹಾಗಿದ್ದರೆ, ಈ ರಸ್ತೆ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ಹಣಕಾಸಿನ ಮಂಜೂರಾತಿಯಾಗಿದೆಯೇ? ಆಗಿದ್ದರೆ ಅದರ ಮೊತ್ತ ಎಷ್ಟು? ಈಗಾಗಲೇ ಬಿಡುಗಡೆಯಾದ ಹಣವೆಷ್ಟು?*

ಈ) *ರಸ್ತೆ ಕಾಮಗಾರಿ ಪ್ರಾರಂಭಿಸಲಾಗಿದೆಯೇ, ಪ್ರಾರಂಭಿಸಿದ್ದರೆ ಕೆಲಸವು ಯಾವ ಹಂತದಲ್ಲಿದೆ?*

ಉ) *ಕೆಲಸ ಪ್ರಾರಂಭಿಸದೇ ಇದ್ದರೆ ವಿಳಂಬಕ್ಕೆ ಕಾರಣವೇನು ಮತ್ತು ಯಾವಾಗ ಪ್ರಾರಂಭಿಸಲಾಗುವುದು. ಹಾಗೂ ಯಾವ ಕಾಲಮಿತಿಯೊಳಗಾಗಿ ಕೆಲಸವನ್ನು ಪೂರ್ಣಗೊಳಿಸುವ ಯೋಜನೆ ಇದೆ?*

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಉದ್ದ 43.30 ಕಿ.ಮೀ. ಇರುತ್ತದೆ.

ಇ) ಈ ರಸ್ತೆ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ಯಾವ ಹಣಕಾಸಿನ ಮಂಜೂರಾತಿ ಆಗಿರುವುದಿಲ್ಲ.

ಈ) ಪ್ರಾರಂಭಿಸಿಲ್ಲ.

ಉ) ಆದರೆ, ಈ ರಸ್ತೆಯ ಭಾಗಶಃ ಅಭಿವೃದ್ಧಿಯನ್ನು ರಾಜ್ಯ ಸರ್ಕಾರವೇ ಕೈಗೆತ್ತಿಕೊಂಡಿದೆ. ಈ ರಸ್ತೆಯ 0.00 ಕಿಮೀನಿಂದ 9.00 ಕಿ.ಮೀ ವರೆಗಿನ ಅಭಿವೃದ್ಧಿ ಮತ್ತು ಸುಧಾರಣೆ ಕಾಮಗಾರಿ

ಕೈಗೆತ್ತಿಕೊಂಡಿದ್ದು, ಭಾಗಶಃ ಪೂರ್ಣಗೊಳಿಸಲಾಗಿದೆ. ಉಳಿದ ಕಾಮಗಾರಿಯನ್ನು 4-2-2001 ರೊಳಗಡೆ ಪೂರ್ಣಗೊಳಿಸುವ ಯೋಜನೆಯಿದೆ.

ಮುಂಡರಗಿ ಪಟ್ಟಣಕ್ಕೆ ನ್ಯಾಯಾಲಯ ಮಂಜೂರಾತಿ

3150 - ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ) : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಗದಗ ಜಿಲ್ಲೆಯ ಮುಂಡರಗಿ ಪಟ್ಟಣಕ್ಕೆ ನ್ಯಾಯಾಲಯ ಮಂಜೂರು ಆಗಿದ್ದು ಎಂದು?*

ಆ) *ಸದರಿ ನ್ಯಾಯಾಲಯವನ್ನು ಇನ್ನೂ ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು?*

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು) :

ಅ) ಮುಂಡರಗಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. (ಕಿರಿಯ ವಿಭಾಗ) ನ್ಯಾಯಾಲಯವನ್ನು ಸರ್ಕಾರಿ ಆದೇಶ ಸಂಖ್ಯೆ: ಲಾ 73 ಎಲ್‌ಸಿಇ 97 ದಿನಾಂಕ: 31-3-1998 ರಲ್ಲಿ ಸ್ಥಾಪಿಸಲು ಮಂಜೂರಾತಿ ನೀಡಲಾಗಿದೆ.

ಆ) ಹೌದು.

ಇ) ಪ್ರಸ್ತುತ ನ್ಯಾಯಾಲಯಕ್ಕೆ ಸೂಕ್ತ ಕಟ್ಟಡ ದೊರಕಿದ ನಂತರ ಪ್ರಾರಂಭಿಸಲಾಗುವುದು.

ಬಯಲುಸೀಮೆ ಪ್ರದೇಶಾಭಿವೃದ್ಧಿ ಕುರಿತು

3151 - ಶ್ರೀ ಪೂಜಾರ್ ಸಿ.ಹೆಚ್. (ಬಾಗಲಕೋಟೆ) : ಮಾನ್ಯ ಮೀನುಗಾರಿಕೆ ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ 2000-2001ನೇ ಸಾಲಿಗೆ ನಿಗದಿ ಮಾಡಿರುವ ಅಂದಾಜು ಮೊತ್ತವೆಷ್ಟು? ಬಿಡುಗಡೆ ಮಾಡಿರುವ ಮೊತ್ತವೆಷ್ಟು?*

ಆ) *ಇದರಲ್ಲಿ ಆಡಳಿತಾತ್ಮಕ ವೆಚ್ಚವೆಷ್ಟು, ಸರ್ಕಾರದ ವಿವೇಚನಾ ನಿಧಿ ಹಾಗೂ ಅಧ್ಯಕ್ಷರ ವಿವೇಚನಾ ನಿಧಿ ಎಷ್ಟು?*

ಇ) *ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೆ ಲಭ್ಯವಾಗಬಹುದಾದ ಮೊತ್ತವೆಷ್ಟು? (ಪೂರ್ಣ ವಿವರಗಳನ್ನು ನೀಡುವುದು)*